# ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಹೋರಾಟಕ್ಕೆ ಮಣಿದ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಆಡಳಿತ ವರ್ಗ

*ಕಾರ್ಮಿಕ ಸಂಗಾತಿಗಳೇ,*

GATWU ವಿನ ಸತತ ಹೋರಾಟಕ್ಕೆ ಮಣಿದು, ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಆಡಳಿತವರ್ಗವು 2013ನೇ ಏಪ್ರಿಲ್‌ನಿಂದ ದಿನಕ್ಕೆ ರೂ. 20.80 ಡಿ.ಎ ಕೊಡದ ಕಾರ್ಮಿಕರಿಗೆ, ಆ ಡಿ.ಎ. ಕೊಡಲು ಮತ್ತು ಏಪ್ರಿಲ್‌ನಿಂದಲೂ ಬಾಕಿ ಮೊತ್ತವನ್ನು ಕೊಡಲು ಒಪ್ಪಿದ್ದಾರೆಂದು ನಮಗೆ ತಿಳಿದುಬಂದಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಸಹ 2013 ಏಪ್ರಿಲ್‌ನಿಂದ ಡಿ.ಎ. ಮೊತ್ತವು ದಿನಕ್ಕೆ 20.80 ರೂ. ಹೆಚ್ಚಳವಾಗಿತ್ತು. ಇದನ್ನು ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಆಡಳಿತವರ್ಗವು ಹೆಲ್ಪರ್‌ಗಳಿಗೆ ಮಾತ್ರವೇ ಕೊಟ್ಟು, ಉಳಿದ ಕಾರ್ಮಿಕರಿಗೆ ರೂ. 5 ರಿಂದ 15ರ ವರೆಗೆ ಮಾತ್ರ ಹೆಚ್ಚಿಸಿತ್ತು. ಈ ಅನ್ಯಾಯದ ವಿರುದ್ಧ GATWU, ಆಡಳಿತವರ್ಗದ ಮೇಲೆ ನಿರಂತರ ಒತ್ತಡ ಹಾಕಿದುದರ ಪರಿಣಾಮವಾಗಿ, ಆಡಳಿತ ವರ್ಗವು ಉಳಿದ ಕಾರ್ಮಿಕರಿಗೆ ಡಿ.ಎ. ಕೊಡಲು ಒಪ್ಪಿಕೊಂಡಿದೆ. ನಮ್ಮ ಈ ಹೋರಾಟಕ್ಕೆ ಅಂತರ ರಾಷ್ಟ್ರೀಯ ಸಂಘಟನೆಗಳು ಬ್ರಾಂಡ್‌ಗಳಿಗೆ ಹಾಗೂ ಆಡಳಿತವರ್ಗಕ್ಕೆ ಒತ್ತಡ ಹಾಕುವುದರ ಮೂಲಕ ಬೆಂಬಲ ಸೂಚಿಸಿದ್ದವು.

## ಆಡಳಿತವರ್ಗವು ಒಪ್ಪಿರುವುದೇನು?

- **ವ್ಯತ್ಯಾಸಗೊಂಡ ಡಿ.ಎ.ಯನ್ನು 2013ರ ಅಕ್ಟೋಬರ್ ನವೆಂಬರ್ ಮತ್ತು ಡಿಸೆಂಬರ್ ವೇತನದಲ್ಲಿ ಕ್ರಮವಾಗಿ ಸೇರಿಸಿ ಕೊಡಲು ಮತ್ತು**
- **ಏಪ್ರಿಲ್‌ನಿಂದಲೂ ಬಾಕಿ ಇರುವ ಡಿ.ಎ. ಮೊತ್ತವನ್ನು 2013ರ ಡಿಸೆಂಬರ್ ಒಳಗಾಗಿ ಕೊಡಲು ಒಪ್ಪಿರುವುದಾಗಿ ನಮಗೆ ತಿಳಿದು ಬಂದಿದೆ.**

ಈ ಮೇಲೆ ತಿಳಿಸಿರುವ ಡಿ.ಎ. ಮತ್ತು ಅರಿಯರ್ಸ್ ಸಿಗದಿದ್ದಲ್ಲಿ ಕಾರ್ಮಿಕರು **GATWU** ವನ್ನು ಕೆಳಗಿನ ವಿಳಾಸ ಅಥವಾ ಸಂಖ್ಯೆಗಳಲ್ಲಿ ಸಂಪರ್ಕಿಸಿ.

*ಕಾರ್ಮಿಕ ಸಂಗಾತಿಗಳೇ,*

ಕಾರ್ಮಿಕ ಸಂಘಟನೆಗಳು ಮಾತ್ರವೇ ಕಾರ್ಮಿಕರಿಗಾಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿಯೆತ್ತಲು ಸಾಧ್ಯ. GATWU ವು ಕಾರ್ಮಿಕರಿಗಾದ ಈ ಅನ್ಯಾಯವನ್ನು ಧ್ವನಿಯೆತ್ತಿ ಪ್ರತಿಭಟಿಸಿರಲಿಲ್ಲವೆಂದರೆ ಕಾರ್ಮಿಕರಿಗೆ ನ್ಯಾಯ ಸಿಗುತ್ತಿರಲಿಲ್ಲ. ಮುಂದೆಯೂ ಸಹ ಈ ಡಿ.ಎ.ಯನ್ನು ಪಡೆದುಕೊಳ್ಳಲು ನಾವು ಸಂಘಟಿತ ಹೋರಾಟ ನಡೆಸಲೇ ಬೇಕಾಗಿದೆ. ಯೂನಿಯನ್‌ಗೆ ಬಲ ಬರುವುದು ನೀವುಗಳೆಲ್ಲರೂ ಯೂನಿಯನ್‌ಗೆ ಸೇರುವುದರಿಂದ ಮಾತ್ರ. ಎಲ್ಲಾ ಕಾರ್ಮಿಕರೂ ಸದಸ್ಯರಾಗುವ ಮೂಲಕ GATWUವಿನ ಬಲ ಹೆಚ್ಚಿಸಿ...


**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:**

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ GATWU**

ಮೈಸೂರು ರಸ್ತೆ ಕಛೇರಿ : ನಂ. 17/1, ಮೊದಲನೇ ಮಹಡಿ, ಬಿ.ಎಂ.ಟಿ.ಸಿ ಬಸ್ ಸ್ಟಾಪ್ ಹತ್ತಿರ, ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 026.

ಪೀಣ್ಯ ಕಛೇರಿ : ನಂ. 13, ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂಗಳೂರು–560 073.

ಮೊಬೈಲ್ ಸಂಖ್ಯೆ: **9482444011, 9880437877, 9844714476**


Scanned with OKEN Scanner